KABK200007992025

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಮುಧೋಳ

ಉಪಸ್ಥಿತರು: ಶ್ರೀ ವಿಜಯಕುಮಾರ ಕನ್ನೂರ,
ಬಿ.ಎ.ಎಲ್.ಎಲ್.ಬಿ. (ಸ್ಪೇಷಲ್)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ವ ಪ್ರ.ದ.ನ್ಯಾ.
ದಂಡಾಧಿಕಾರಿಗಳು, ಮುಧೋಳ.

VIJAYAKUMAR KANNUR
Digitally signed by VIJAYAKUMAR KANNUR
Date: 2025.11.04 17:26:52 +0530

ದಿನಾಂಕ: **28** ನೇ ಅಕ್ಟೋಬರ **2025**

ಅಸಲು ದಾವೆ ನಂ.**93/2025**

ವಾದಿ :

**1.** ಶ್ರೀ.ಹಣಮಂತಗೌಡ ತಂದೆ ವೆಂಕನಗೌಡ ಉರ್ಫ ವೆಂಕಪ್ಪ ಪಾಟೀಲ,
ವಯಾ: **64** ವರ್ಷ, ಉ: ಒಕ್ಕಲುತನ ಮತ್ತು ಎಕ್ಸ್ ಸರ್ವಿಸಮನ್,
ಸಾಃ ಮೆಟಗುಡ್ಡ, ತಾಃ ಮುಧೋಳ,
ಸದ್ಯ ಪ್ಲಾಟ ನಂ.**2243**, ರಾಮತೀರ್ಥ ನಗರ,
ಕನಬರಗಿ ಲೇಕ ಹತ್ತಿರ, ಬೆಳಗಾವಿ,
ತಾ ಮತ್ತು ಜಿಃ ಬೆಳಗಾವಿ.

(ವಾದಿಯರ ಪರ ಶ್ರೀ.ವಿ.ಎಸ್.ಎಸ್., ವಕೀಲರು)

// ವಿರುದ್ಧ //

ಪ್ರತಿವಾದಿಯರು :

**1.** ಶ್ರೀಮತಿ. ಕಸ್ತೂರೆವ್ವ ಉರ್ಫ ಕಾಶೀಬಾಯಿ
ಗಂಡ ವೆಂಕನಗೌಡ ಉರ್ಫ ವೆಂಕಪ್ಪ ಪಾಟೀಲ,
ವಯಾ: **93** ವರ್ಷ, ಉ: ಮನೆಗೆಲಸ,
ಸಾಃ ಮೆಟಗುಡ್ಡ, ತಾಃ ಮುಧೋಳ,
ಸದ್ಯ ಕೆ.ಆಫ್ಃ ಅಶೋಕ ವಿ ಪಾಟೀಲ

ಪಾರ್ವತಿ ನಿಲಯ, ವಾರ್ಡ ನಂ.5,
ರನ್ನ ಸರ್ಕಲ ಹತ್ತಿರ, ಮುಧೋಳ.

**2.** ಶ್ರೀಮತಿ. ಲಕ್ಷ್ಮೀಬಾಯಿ ಗಂಡ ಗೌಡಪ್ಪ ಪಾಟೀಲ,
ವಯಾ: **65** ವರ್ಷ, ಉ: ಮನೆಗೆಲಸ,
ಸಾಃ ಮೆಟಗುಡ್ಡ, ತಾಃ ಮುಧೋಳ,
ಸದ್ಯಃ ಲಕ್ಷ್ಮೀ ನಗರ ಮೂಡಲಗಿ, ತಾಃ ಮೂಡಲಗಿ.

**3.** ಶ್ರೀ.ರಮೇಶ ತಂದೆ ಗೌಡಪ್ಪ ಪಾಟೀಲ,
ವಯಾ: **40** ವರ್ಷ, ಉ: ಒಕ್ಕಲುತನ ಮತ್ತು ಆರ್ಮಿ ಸೇವೆ,
ಸಾಃ ಮೆಟಗುಡ್ಡ, ತಾಃ ಮುಧೋಳ,
ಸದ್ಯಃ ಲಕ್ಷ್ಮೀ ನಗರ ಮೂಡಲಗಿ, ತಾಃ ಮೂಡಲಗಿ.

**4.** ಶ್ರೀಮತಿ.ಅಂಜನಾ ಗಂಡ ಅಮೀತ ಇಮ್ಮಣ್ಣವರ,
ವಯಾ: **34** ವರ್ಷ, ಉ: ಮನೆಕೆಲಸ,
ಸಾಃ ವಾರ್ಡ ನಂ.5, ಬಸವ ನಗರ,
ಮುಧೋಳ, ತಾಃ ಮುಧೋಳ, ಜಿಃ ಬಾಗಲಕೋಟ.

**5.** ಶ್ರೀ.ಅಶೋಕ ತಂದೆ ವೆಂಕನಗೌಡ ಉರ್ಫ ವೆಂಕಪ್ಪ ಪಾಟೀಲ,
ವಯಾ: **65** ವರ್ಷ, ಉ: ಒಕ್ಕಲುತನ,
ಸಾಃ ಪಾರ್ವತಿ ನಿಲಯ, ವಾರ್ಡ ನಂ.5, ರನ್ನ ಸರ್ಕಲ,
ಮುಧೋಳ, ಜಿಃ ಬಾಗಲಕೋಟ.

**6.** ಶ್ರೀ.ಬಾಬುಗೌಡ ತಂದೆ ವೆಂಕನಗೌಡ ಉರ್ಫ ವೆಂಕಪ್ಪ ಪಾಟೀಲ,
ವಯಾ: **57** ವರ್ಷ, ಉ: ಒಕ್ಕಲುತನ,
ಸಾಃ ಮೆಟಗುಡ, ತಾಃ ತಾಃ ಮುಧೋಳ, ಜಿಃ ಬಾಗಲಕೋಟ.

**7.** ಶ್ರೀಮತಿ.ಗೀತಾ ಗಂಡ ಸುಭಾಸ ಪಾಟೀಲ,
ವಯಾ: **44** ವರ್ಷ, ಉ: ಮನೆಕೆಲಸ,
ಸಾಃ ಮೆಟಗುಡ್ಡ, ಮುಧೋಳ, ಜಿಃ ಬಾಗಲಕೋಟ.

**8.** ಕುಮಾರಿ.ವಿಜೇತಾ ತಂದೆ ಸುಭಾಸ ಪಾಟೀಲ,
ವಯಾ: **22** ವರ್ಷ, ಉ: ವಿದ್ಯಾರ್ಥಿ,
ಸಾಃ ಮೆಟಗುಡ್ಡ, ಮುಧೋಳ, ಜಿಃ ಬಾಗಲಕೋಟ.

**9.** ಕುಮಾರ,ವೆಂಕನಗೌಡ ತಂದೆ ಸುಭಾಸ ಪಾಟೀಲ,
ವಯಾ: **17** ವರ್ಷ, ಉ: ವಿದ್ಯಾರ್ಥಿ,
ಅಲ್ಪವಯಿ ಪಾಲನ ಕರ್ತೆ ಜನಕ ತಾಯಿ,
ಪ್ರತಿವಾದಿ 7/ಶ್ರೀಮತಿ.ಗೀತಾ ಗಂಡ ಸುಭಾಸ ಪಾಟೀಲ,
ಮೆಟಗುಡ್ಡ, ತಾ: ಮುಧೋಳ, ಜಿ: ಬಾಗಲಕೋಟ.

**10.**ಶ್ರೀಮತಿ.ನಿರ್ಮಲ ಗಂಡ ಬಾಬುಗೌಡ ಪಾಟೀಲ,
ವಯಾ: **48** ವರ್ಷ, ಉ: ಮನೆಗೆಲಸ,
ಸಾ: ಮೆಟಗುಡ್ಡ, ತಾ: ಮುಧೋಳ, ಜಿ: ಬಾಗಲಕೋಟ.

(ಪ್ರತಿವಾದಿ 1 ರಿಂದ 5, 7 ರಿಂದ 9 ರ ಪರ ಶ್ರೀ. ಎಲ್.ಬಿ.ಪಿ, ವಕೀಲರು)
(ಪ್ರತಿವಾದಿ 6 ಮತ್ತು 10 ಪರ ಶ್ರೀ.ವಿ.ಬಿ.ಎಚ್. ವಕೀಲರು)

| | | |
|---|---|---|
| i | ಅರ್ಜಿಯನ್ನು ಸಲ್ಲಿಸಿರುವ ನಿಭಂದನೆಗಳು | ದಿವಾಣಿ ಪಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹ ಕಲಂ.151 |
| ii | ಅರ್ಜಿಯ ಸ್ವರೂಪ | ತಾತ್ಕಾಲಿಕ ನಿರ್ಭಂದಕಾಜ್ಞೆಗಾಗಿ |
| iii | ಅರ್ಜಿಯನ್ನು ದಾಖಲಿಸಿರುವ ದಿನಾಂಕ: | 02.05.2025 |
| iv | ಅರ್ಜಿಯ ಸಂಖ್ಯೆ: | 2 |
| V | ಪ್ರತಿವಾದಿಯರು ತಮ್ಮ ತಕರಾರನ್ನು ದಾಖಲಿಸಿರುವ ದಿನಾಂಕ: | 15.07.2025 |
| vi | ಮಧ್ಯಂತರ ಅರ್ಜಿಯ ಮೇಲಿ ಆದೇಶ ಮಾಡಿದ ದಿನಾಂಕ: | 28.10.2025 |

(ವಿಜಯಕುಮಾರ.ಎಮ್.ಕನ್ನೂರ)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಮುಧೋಳ.

ಮಧ್ಯಂತರ ಅರ್ಜಿ ಸಂಖ್ಯೆ 2 ರ ಮೇಲಿನ ಆದೇಶ

ವಾದಿಯ ಪರ ನ್ಯಾಯವಾದಿಗಳು ಮಧ್ಯಂತರ ಅರ್ಜಿ ಸಂಖ್ಯೆ: **2** ಅನ್ನು ದಿವಾಣಿ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ **39** ನಿಯಮ **1** ಮತ್ತು **2** ಸಹ ಕಲಂ.**151** ರ ಅಡಿಯಲ್ಲಿ ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸಿ, ಈ ದಾವೆಯ ಅಧಿವಿಚಾರಣೆ ಆಗುವವರೆಗೂ

ಮೆಟಗುಡ್ಡ ಗ್ರಾಮದ ದಾವಾ ಆಸ್ತಿ ಕ್ರ.ಸಂಖ್ಯೆ: **1** ರಿಂದ **3**ನ್ನು ಪ್ರತಿವಾದಿ **6** ರಿಂದ **10** ರವರು ಅಥವಾ ಅವರ ಪರವಾಗಿ ಆಗಲೀ ಹಾಗೂ ಅವರ ಪರ ಹಿತೈಷಿಗಳಾಗಲೀ ಅಥವಾ ಅವರ ಸಂಬಂಧಿಕಾರಾಗಲೀ ದಾವಾ ಆಸ್ತಿಗಳನ್ನು ಬೆರೆಯವರಿಗೆ ಹಸ್ತಾಂತರಿಸದಂತೆ ಪ್ರತಿವಾದಿ **6** ಮತ್ತು **10** ರವರ ವಿರುದ್ದ ತಾತ್ಕಾಲಿಕ ತಡೆಯಾಜ್ಞೆಯನ್ನು ನೀಡುವಂತೆ ಕೋರಿ ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುವರು.

**2.** ಸದರಿ ಮಧ್ಯಂತರ ಅರ್ಜಿಗೆ ಲಗತ್ತಿಸಿರುವ ಪ್ರಮಾಣ ಪತ್ರದಲ್ಲಿ ವಾದಿ **1** ರವರು ಹೇಳುವುದೇನೆಂದರೆ, ವಾದಿಯು ಪ್ರತಿವಾದಿಯರ ವಿರುದ್ದ ಈ ದಾವೆಯನ್ನು ದಾವಾ ಆಸ್ತಿಗಳ ಪಾಲು ವಿಭಾಗಕ್ಕಾಗಿ ಹಾಗೂ ಕಬ್ಜೆಗಾಗಿ ಕೋರಿ ಸಲ್ಲಿಸಿರುವರು. ವಾದಿ ಹಾಗೂ ಪ್ರತಿವಾದಿ **1** ರಿಂದ **9** ರವರು ರವರು ಹಿಂದೂ ಅವಿಭಜಿತ ಕುಟುಂಬದ ಸದಸ್ಯರುಗಳಾಗಿದ್ದು, ದಾವಾ ಶೆಡ್ಯೂಲ ಎ ಆಸ್ತಿಗಳು ಹಿಂದು ಜಂಟಿ ಕುಟುಂಬದ ಆಸ್ತಿಗಳಾಗಿದ್ದು, ಪ್ರತಿವಾದಿ **10** ರವರು ಪ್ರತಿವಾದಿ **6** ರವರ ಹೆಂಡತಿಯಾಗಿದ್ದು, ಈ ಮಧ್ಯಂತರ ಅರ್ಜಿಯಲ್ಲಿ ಹೇಳಿರುವ ಈ ದಾವಾ ಆಸ್ತಿಗಳು ಇವರ ಹೆಸರಿನಲ್ಲಿರುವವು. ಈ ದಾವಾ ಶೆಡ್ಯೂಲ ಎ ಆಸ್ತಿಗಳಲ್ಲಿ ಪ್ರತಿವಾದಿ **10** ರವರಿಗೆ ಯಾವುದೇ ಸ್ವತಂತ್ರವಾದ ಹಕ್ಕು ಇರುವುದಿಲ್ಲ. ದಾವಾ ಆಸ್ತಿಗಳು ಮೂಲತಃ ವೆಂಕನಗೌಡ ಪಾಟೀಲ ಈತನ ಮಾಲೀಕತ್ವದ ಆಸ್ತಿಗಳಾಗಿದ್ದು, ಈತ ಮೃತಪಟ್ಟ ನಂತರ ವಾದಿ, ಪ್ರತಿವಾದಿ **1, 5** ಮತ್ತು **6** ರವರು ಮತ್ತು ತನ್ನ ಮೃತ ಸಹೋದರ ಗೌಡಪ್ಪ ಮತ್ತು ಸುಭಾಸ ವಾರಸಾ ನಾತೆಯಿಂದ ಮಾಲೀಕರಾಗಿದ್ದು ಮತ್ತು ಜಂಟಿ ಕಬ್ಜೆಯನ್ನು ಹೊಂದಿರುವರು. ಈಗ ವಾದಿ ಮತ್ತು ಪ್ರತಿವಾದಿಯರ ಮಧ್ಯ ಸಂಬಂಧ ಚೆನ್ನಾಗಿರುವುದಿಲ್ಲ. ವಾದಿಯು ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಪಾಲು ವಿಭಾಗ ಮಾಡಿಕೊಡುವಂತೆ ಪ್ರತಿವಾದಿ

**1** ರಿಂದ **9** ರವರಿಗೆ ವಿನಂತಿಸಿಕೊಂಡಿದ್ದು, ಆಗ ಅವರು ನಿರಾಕರಿಸಿರುವರು. ಪ್ರತಿವಾದಿ **6** ಮತ್ತು **10** ರವರ ಹೆಸರುಗಳು ದಾವಾ ಆಸ್ತಿಯ ದಾಖಲೆಗಳಲ್ಲಿ ಹೆಸರು ದಾಖಲಾಗಿರುವುದರ ದುರುಪಯೋಗ ಪಡಿಸಿಕೊಂಡು ಅವುಗಳನ್ನು ಹಸ್ತಾಂತರ ಮಾಡಲು ಪ್ರಯತ್ನಿಸುತ್ತಿರುವರು. ಸದರಿ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸದಿದ್ದರೇ ವಾದಿಗೆ ತುಂಬಲಾರದ ನಷ್ಟ ಹಾನಿ ಉಂಟಾಗುವ ಸಾಧ್ಯತೆ ಇರುವುದು. ಸದರೀ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಿದರೆ ಪ್ರತಿವಾದಿಯರಿಗೆ ಯಾವುದೇ ರೀತಿಯ ನಷ್ಟ, ಹಾನಿ ಉಂಟಾಗುವುದಿಲ್ಲ. ಆದ್ದರಿಂದ ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ ಆದೇಶ ಮಾಡಬೇಕೆಂದು ವಿನಂತಿಸಿಕೊಂಡಿರುವರು.

**3.** ಸದರಿ ಮಧ್ಯಂತರ ಅರ್ಜಿಗೆ ಪ್ರತಿವಾದಿ **6** ಮತ್ತು **10** ರವರು ದಿನಾಂಕ: **15.07.2025** ರಂದು ಮೆಮೋವನ್ನು ಸಲ್ಲಿಸಿ, ತಾವು ಸಲ್ಲಿಸಿರುವ ಲಿಖಿತ ಪತ್ರವನ್ನೇ ಈ ಮಧ್ಯಂತರ ಅರ್ಜಿಗೆ ತಕರಾರು ಎಂದು ಪರಿಗಣಿಸಬೇಕೆಂದು ಹೇಳಿರುವರು. ಪ್ರತಿವಾದಿ **6** ಮತ್ತು **10** ರವರು ತಮ್ಮ ಲಿಖಿತ ಪತ್ರದಲ್ಲಿ ಹೇಳುವುದೇನೆಂದರೆ, ವಾದಿ ಮತ್ತು ಪ್ರತಿವಾದಿ **1** ರಿಂದ **9** ರವರು ಜಂಟಿ ಕುಟುಂಬದ ಸದಸ್ಯರು ಎಂಬ ಸಂಗತಿ ಒಪ್ಪಿಕೊಂಡಿರುವರು. ಆದರೆ ದಾವಾ ಶೆಡ್ಯೂಲ ಎ ಆಸ್ತಿಗಳು ಪಿತ್ರಾರ್ಜಿತ ಅವಿಭಜಿತ ಜಂಟಿ ಕುಟುಂಬದ ಆಸ್ತಿಗಳು ಎಂಬುದನ್ನು ನಿರಾಕರಿಸಿರುವರು. ಈ ಮಧ್ಯಂತರ ಅರ್ಜಿಯಲ್ಲಿ ಹೇಳಿರುವಂತಹ ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ದಿನಾಂಕ **14.02.1995** ರಂದು ಪಾರ್ವತೆವ್ವ ಗಂಡ ರಂಗಪ್ಪ ಪಾಟೀಲ ಇವಳು ಪ್ರತಿವಾದಿ **6**

ರವರ ಹೆಸರಿನಲ್ಲಿ ನೊಂದಾಯಿತ ಮೃತ್ಯುಪತ್ರವನ್ನು ಬರೆದುಕೊಟ್ಟಿದ್ದು, ಅದರ ಆಧಾರದ ಮೇರೆಗೆ ಪ್ರತಿವಾದಿ **6** ರವರು ಸಂಪೂರ್ಣ ಮಾಲೀಕರು ಮತ್ತು ಕಬ್ಜೆದಾರರು ಆಗಿರುವರು. ಸರ್ವೇ ನಂ.**169/3** ಆಸ್ತಿಯನ್ನು ಪ್ರತಿವಾದಿ **6** ರವರು ಪ್ರತಿವಾದಿ **10** ರವರ ಹೆಸರಿನಲ್ಲಿ ನೊಂದಾಯಿತ ದಾನ ಪತ್ರವನ್ನು ಮಾಡಿಕೊಟ್ಟಿರುವರು. ವಾದ ಪತ್ರದ ಖಂಡಿಕೆ **5** ರಲ್ಲಿ ಹೇಳಿರುವ ಸಂಗತಿಗಳು ನಿಜವಿರುವುದಿಲ್ಲ. ದಾವಾ ಶೆಡ್ಯೂಲ ಎ ಆಸ್ತಿಗಳು ವಾದಿ ಮತ್ತು ಪ್ರತಿವಾದಿ **1** ರಿಂದ **9** ರವರು ಜಂಟಿ ಕಬ್ಜೆಯನ್ನು ಹೊಂದಿರುವರು ಎಂಬ ಸಂಗತಿ ನಿಜವಿರುವುದಿಲ್ಲ. ವಾದ ಪತ್ರದ ಖಂಡಿಕೆ **6** ರಿಂದ **8** ರಲ್ಲಿನ ಸಂಗತಿಗಳು ನಿಜವಿರುವುದಿಲ್ಲ.

**4.** ಮುಂದುವರೆದು ಪ್ರತಿವಾದಿ **6** ಮತ್ತು **10** ರವರು ತಮ್ಮ ಲಿಖಿತ ಪತ್ರದಲ್ಲಿ ಹೇಳುವುದೇನೆಂದರೆ, ವಾದಿ ಮತ್ತು ಪ್ರತಿವಾದಿಯರ ಕುಟುಂಬದ ಮೂಲ ಪುರುಷ ರಾಮಪ್ಪ ಯಮನಪ್ಪ ಬಿರಾದರ ಪಾಟೀಲ ಈತನಿಗೆ ವೆಂಕನಗೌಡ, ರಂಗಪ್ಪ ಮತ್ತು ಶಿವನಗೌಡ ಎಂಬ ಮಕ್ಕಳಿದ್ದು, ಇವರು **1972** ರಲ್ಲಿ ಪಾಲು ವಾಟ್ನಿ ಮಾಡಿಕೊಂಡಿದ್ದು, ಆ ಪ್ರಕಾರ ಈ ಮಧ್ಯಂತರ ಅರ್ಜಿಯಲ್ಲಿ ಹೇಳಿರುವ **3** ದಾವಾ ಆಸ್ತಿಗಳು ರಂಗಪ್ಪನ ಪಾಲಿಗೆ ಹಕ್ಕು ಬದಲಾವಣೆ ಆದೇಶ ಸಂಖ್ಯೆ: **929** ರ ಪ್ರಕಾರ ದಿನಾಂಕ: **18.11.1972** ರಲ್ಲಿ ಹಕ್ಕು ಬದಲಾವಣೆಯಾಗಿರುವುದು. ರಂಗಪ್ಪ ದಿನಾಂಕ:

**23.11.1988** ರಂದು ಮೃತಪಟ್ಟಿದ್ದು, ಈತನಿಗೆ ಯಾವುದೇ ಮಕ್ಕಳು ಆಗಿರುವುದಿಲ್ಲ. ವಾರಸಾ ನಾತೆಯಿಂದ ಈತನ ಹೆಂಡತಿಯಾದ ಪಾರ್ವತೆವ್ವ ಇವರ ಹೆಸರಿನಲ್ಲಿ ಹಕ್ಕು ಬದಲಾವಣೆ ಸಂಖ್ಯೆ: **1867** ಹಾಗೂ **2273** ರ ಪ್ರಕಾರ ಪಾರ್ವತೆವ್ವ ಹೆಸರಿನಲ್ಲಿ ಈ ಮಧ್ಯಂತರ ಅರ್ಜಿಯಲ್ಲಿ ಹೇಳಿರುವಂತಹ ದಾವಾ ಆಸ್ತಿಗಳು ಹಕ್ಕು ಬದಲಾವಣೆಯಾಗಿರುವವು. ನಂತರ ಪಾರ್ವತೆವ್ವ ನೊಂದಾಯಿತ ಮೃತ್ಯುಪತ್ರವನ್ನು ಪ್ರತಿವಾದಿ **6** ರವರ ಹೆಸರಿನಲ್ಲಿ ದಿನಾಂಕ: **14.02.1995** ರಂದು ಬರೆದುಕೊಟ್ಟಿರುವಳು. ಅವಳು ದಿನಾಂಕ: **02.02.2013** ರಂದು ಮೃತಪಟ್ಟ ನಂತರ ಈ ಮಧ್ಯಂತರ ಅರ್ಜಿಯಲ್ಲಿ ಹೇಳಿರುವ ದಾವಾ ಆಸ್ತಿ ಸರ್ವೇ ನಂ.**10/4** ವಿಸ್ತೀರ್ಣ **3** ಎಕರೆ **35** ಗುಂಟೆಸಿ ಸರ್ವೇ ನಂ.**169/3** ವಿಸ್ತೀರ್ಣ **3** ಎಕರೆ **15** ಗುಂಟೆ ಹಾಗೂ ಸರ್ವೇ ನಂ.**53/1** ಸಿ**2** ವಿಸ್ತೀರ್ಣ **4** ಎಕರೆ **22** ಗುಂಟೆ ಜಮೀನುಗಳಿಗೆ ಪ್ರತಿವಾದಿ **6** ರವರೇ ಸಂಪೂರ್ಣ ಮಾಲೀಕ ಮತ್ತು ಕಬ್ಜೆದಾರಳಾಗಿದ್ದು, ಈ ದಾವಾ ಆಸ್ತಿಗಳಲ್ಲಿ ವಾದಿಗೆ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇರುವುದಿಲ್ಲ. ವೆಂಗನಗೌಡನ ಪಾಲಿಗೆ ಬಂದಿರುವಂತಹ ಆಸ್ತಿಗಳಲ್ಲಿ ವಾದಿ, ಪ್ರತಿವಾದಿ **1** ರಿಂದ **5** ರವರಿಗೆ, ಪ್ರತಿವಾದಿ **7** ರಿಂದ **9** ರವರಿಗೆ ಹಾಗೂ ಪ್ರತಿವಾದಿ **6** ರವರಿಗೆ ತಲಾ **1/6** ಹಿಸ್ಸೆ ಇರುವುದು. ಆದ್ದರಿಂದ ಈ ದಾವೆಯು ಕಾನೂನಿನ ಅಡಿಯಲ್ಲಿ ಊರ್ಜಿತವಾಗಿರುವುದಿಲ್ಲ.

ಆದ್ದರಿಂದ ಈ ಮಧ್ಯಂತರ ಅರ್ಜಿಯನ್ನು ಖರ್ಚು ಸಹಿತ ವಜಾಗೊಳಿಸುವಂತೆ ವಿನಂತಿಸಿಕೊಂಡಿರುವರು.

5. ಪ್ರತಿವಾದಿ 6 ಮತ್ತು 10 ರ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ ತಮ್ಮ ವಾದಕ್ಕೆ ಪೂರಕವಾಗಿ ಈ ಕೆಳಕಂಡ ತೀರ್ಪುಜನ್ಯ ಕಾನೂನನ್ನು ಅವಲಂಬಿಸಿರುವರು.

**1. 2024(4) KCCR 3519**
**(Muniveerappa and others Vs Muthappa and others)**

**2.2018 (4) KCCR 3088**
**(Kariyamma and others Vs Nagappa and another)**

**3. KCCR 2018 (4) 3269**
**(S.C.Gangadharaiah Vs Remco (BHEL), House Building Co-Operative Society Limited, Bengaluru and others)**

6. ಈ ಹಿನ್ನೆಲೆಯಲ್ಲಿ ಈ ಕೆಳಕಂಡ ಅಂಶಗಳು ನನ್ನ ಅವಗಾಹನೆಗೆ ಉದ್ಭವಿಸಿದವು.

ಅಂಶಗಳು

1. ಮಧ್ಯಂತರ ಅರ್ಜಿ ಸಂಖ್ಯೆ: 2 ನ್ನು ವಾದಿಯು ಮೇಲ್ನೋಟಕ್ಕೆ ಸಮಂಜಸವಾದ ದಾವೆಯನ್ನು ಹೊಂದಿರುತ್ತಾರೆ ಎಂಬುದನ್ನು ವಾದಿ ರುಜುವಾತುಪಡಿಸುವರೇ ?

2. ಈ ಮಧ್ಯಂತರ ಅರ್ಜಿಯು ತಮ್ಮ ಪರವಾಗಿ ಇರುತ್ತದೆ ಎಂಬುದನ್ನು ವಾದಿಯ ರುಜುವಾತುಪಡಿಸುವರೇ ?

3. ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ ಒಂದು ವೇಳೆ ತಾತ್ಕಾಲಿಕ ನಿರ್ಬಂಧಕಾಜ್ಞೆ ನೀಡದೆ ಇದ್ದರೆ ವಾದಿಗೆ ತುಂಬಲಾರದ ನಷ್ಟ ಉಂಟಾಗುವ ಸಾಧ್ಯತೆ ಇರುತ್ತದೆಂಬುದನ್ನು ಮೇಲ್ನೋಟಕ್ಕೆ ವಾದಿಯು ರುಜುವಾತುಪಡಿಸುವರೇ ?

**4.** ಏನು ಆದೇಶ **?**

**7.** ಮೇಲೆ ಹೇಳಿದ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತೇನೆ.

ಅಂಶ **1 :** ನಕಾರಾತ್ಮಕವಾಗಿ,

ಅಂಶ **2 :** ನಕಾರಾತ್ಮಕವಾಗಿ,

ಅಂಶ **3 :** ನಕಾರಾತ್ಮಕವಾಗಿ,

ಅಂಶ **4 :** ಅನ್ನು ಅಂತಿಮ ಆದೇಶದಂತೆ,
ಈ ಕೆಳಕಂಡ ಕಾರಣಗಳಿಗಾಗಿ.

ಕಾರಣಗಳು

**8.** ಅಂಶ **1** ರಿಂದ **3:** ಈ ಅಂಶಗಳು ಒಂದಕ್ಕೊಂದು ಸಂಬಂಧಪಟ್ಟಿರುವುದರಿಂದ ಸಂಗತಿಗಳ ಪುನರಾವರ್ತನೆಯಾಗುವುದನ್ನು ತಪ್ಪಿಸುವ ಸಲುವಾಗಿ ಅವುಗಳನ್ನು ಏಕಕಾಲಕ್ಕೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ **39** ನಿಯಮ **1** ಮತ್ತು **2** ಸಹ ಕಲಂ.**151** ರ ಅಡಿಯಲ್ಲಿ ನಿರ್ಬಂಧಕಾಜ್ಞೆ ಹೊರಡಿಸುವ ಸಲುವಾಗಿ ನ್ಯಾಯಾಲಯವು ಅರ್ಜಿಯನ್ನು ಮೇಲ್ನೋಟಕ್ಕೆ ಮೊಕದ್ದಮೆ ಮತ್ತು ಸಂಭಾವನೆಯ ರೀತಿಯಿಂದ ಎಂಬ ಆಧಾರದ ಮೇಲೆ ಯಾವುದೇ ವಿಶ್ಲೇಷಣೆ ಮಾಡಿರುವುದಿಲ್ಲ. ತಾತ್ಕಾಲಿಕ ತಡೆಯಾಜ್ಞೆಯನ್ನು ಪಡೆಯಬೇಕಾದರೆ ಅರ್ಜಿದಾರರು ವಿಚಾರಣೆಗೆ ಹೋಗಲು ಮೇಲ್ನೋಟಕ್ಕೆ ಸೂಕ್ತ ವಿವಾದವನ್ನು ಹೊಂದಿರಬೇಕು. ಕಾನೂನುಬದ್ದ ಹಕ್ಕು ತೀರ್ಮಾನಿಸುವುದಕ್ಕೆ ಮೊದಲು ಸರಿಪಡಿಸುವಂತೆ ಸೂಕ್ತ ವಿವಾದವನ್ನು ಹೊಂದಿರಬೇಕು. ಕಾನೂನುಬದ್ಧ ಹಕ್ಕು ತೀರ್ಮಾನಿಸುವುದಕ್ಕೆ ಮೊದಲು ಸರಿಪಡಿಸುವಂತೆ ಹಾನಿಯನ್ನು ರಕ್ಷಿಸಲು ರಕ್ಷಣೆ ಹೊಂದಿರಬೇಕು. ತಡೆಯಾಜ್ಞೆಯನ್ನು ನೀಡುವುದಕ್ಕಿಂತ ಅದನ್ನು ಪ್ರಧಾನ ಮಾಡದೇ ಇರುವುದರಿಂದ ಉಂಟಾಗುವ ಹಾನಿ ಹೆಚ್ಚಿನದು ತೀವ್ರತರಹದ್ದಾಗಿರುತ್ತದೆ.

**9.** ವಾದಿಯು ಈ ದಾವೆಯನ್ನು ಪ್ರತಿವಾದಿಯರ ವಿರುದ್ದ ಒಟ್ಟು **9** ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ಪಾಲು ವಿಭಾಗ ಕೋರಿ ಈ ದಾವೆಯನ್ನು ದಾಖಲು ಮಾಡಿರುವರು.ಈ ದಾವೆಯಲ್ಲಿ ಪ್ರತಿವಾದಿಯರಿಗೆ ಸಮನ್ಸ ಹೊರಡಿಸಿದ ನಂತರ ನ್ಯಾಯಾಲಯಕ್ಕೆ ಹಾಜರಾಗಿ ಲಿಖಿತ ಪತ್ರವನ್ನು ಸಲ್ಲಿಸಿರುವರು. ಈ ದಾವೆ ದಾಖಲು ಮಾಡುವ ಸಮಯದಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ: **1** ನ್ನು ಮೆಟಗುಡ್ಡ ಗ್ರಾಮದ ದಾವಾ ಆಸ್ತಿ ಸರ್ವೇ ನಂ.**10/4** ವಿ **3** ಎಕರೆ **35** ಗುಂಟೆ, **169/3** ವಿ **3** ಎಕರೆ **15** ಗುಂಟೆ ಹಾಗೂ **53/1** ಸಿ**2** ವಿ **4** ಎಕರೆ **22** ಗಂಟೆಯ ಜಮೀನುಗಳಿಗೆ ಸಂಬಂಧಪಟ್ಟಂತೆ ಮಾತ್ರ ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ ಪ್ರತಿವಾದಿ **6** ಮತ್ತು **10** ರವರ ವಿರುದ್ದ ತಾತ್ಕಾಲಿಕ ತಡೆಯಾಜ್ಞೆ ನೀಡುವಂತೆ ಕೋರಿಕೊಂಡಿರುವರು.

**10.** ವಾದಿ ಮತ್ತು ಪ್ರತಿವಾದಿಯರ ಸಂಬಂಧದ ಬಗ್ಗೆ ಯಾವುದೇ ವಿವಾದವಿರುವುದಿಲ್ಲ. ಅದೇರೀತಿ ವಾದ ಪತ್ರದಲ್ಲಿ ಹೇಳಿರುವಂತಹ ಕುಟುಂಬದ ಮೂಲ ಪುರುಷ ವೆಂಕನಗೌಡನಿಗೆ ರಂಗಪ್ಪ ಎಂಬ ಸಹೋದರನಿದ್ದ ಬಗ್ಗೆ ಯಾವುದೇ ವಿವಾದವಿರುವುದಿಲ್ಲ. ವಾದಿಯು ವಾದ ಪತ್ರದಲ್ಲಿ ಹೇಳಿರುವಂತೆ, ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತಹ **3** ಆಸ್ತಿಗಳು ವಾದಿ ಮತ್ತು ಪ್ರತಿವಾದಿಯರ ಜಂಟಿ ಕುಟುಂಬದ ಆಸ್ತಿಗಳಾಗಿರುವುದಾಗೆಂದು ಹೇಳಿರುವರು. ಆದರೆ ಪ್ರತಿವಾದಿ **6** ಮತ್ತು **10** ರವರು ಹಾಜರುಪಡಿಸಿರುವ ಹಕ್ಕು ಬದಲಾವಣೆ ಆದೇಶ ಸಂಖ್ಯೆ: **929** ರ ಪ್ರಕಾರ ದಿನಾಂಕ: **18.11.1975** ರ ಆದೇಶದ ಪ್ರಕಾರ ಪಾಲು ವಾಟ್ನಿಯ ಪ್ರಕಾರ ಸರ್ವೇ ನಂ.**53/1** ಬಿ, ಸರ್ವೇ ನಂ.**169** ದ **10/1**, **36/2** ಬಿ ಈ ಆಸ್ತಿಗಳು ರಂಗಪ್ಪ ರಾಮಪ್ಪ ಪಾಟೀಲ ಇವರಿಗೆ ವಾಟ್ನಿ ಪತ್ರದ ಪ್ರಕಾರ ಬಂದಿರುವುದು ಈ ದಾಖಲೆಯಿಂದ

ಸ್ಪಷ್ಟವಾಗುವುದು. ಈ ದಾಖಲೆಯಿಂದ ಸ್ಪಷ್ಟವಾಗುವುದೇನೆಂದರೆ ಈ ಮಧ್ಯಂತರ ಅರ್ಜಿಯಲ್ಲಿ ಹೇಳಿರುವಂತಹ ದಾವಾ ಆಸ್ತಿಗಳು ವಾಟ್ನಿಯ ಪ್ರಕಾರ ರಂಕಪ್ಪ ರಾಮಪ್ಪ ಪಾಟೀಲನ ಸಂಪೂರ್ಣ ಮಾಲೀಕತ್ವದ ಆಸ್ತಿಗಳಾಗಿರುವವು ಎಂಬುದು ಸ್ಪಷ್ಟವಾಗುವುದು. ಈ ಪ್ರತಿವಾದಿಯರು ಹಾಜರುಪಡಿಸಿರುವ ಹಕ್ಕು ಬದಲಾವಣೆ ಆದೇಶ ಸಂಖ್ಯೆಃ **1867** ರ ಪ್ರಕಾರ ದಿನಾಂಕಃ **10.12..1988** ರ ಪ್ರಕಾರ ವಾರಸಾ ನಾತೆಯಿಂದ ವಾದಿಯ ತಂದೆಯಾದ ವೆಂಕನಗೌಡನ ಸಹೋದರನಾದ ರಂಗಪ್ಪ ರಾಮಪ್ಪ ಪಾಟೀಲ ಇವರು ದಿನಾಂಕಃ **23.11.1988** ರಂದು ಮೃತರಾಗಿದ್ದು ಮೃತರಿಗೆ ಗಂಡು ಹೆಣ್ಣು ಮಕ್ಕಳು ಯಾರು ಇರುವುದಿಲ್ಲ. ಮತ್ತು ಮೃತನ ಹೆಂಡತಿ ಪಾರ್ವತೆವ್ವ ಅಂತಾ ಒಬ್ಬಳೇ ಇದ್ದು ಸದರ ಮೃತನ ಹೆಸರನ್ನು ಕಡಿಮೆ ಮಾಡಿ ಹಃರಕ್ಕೆ ತನ್ನ ಹೆಸರನ್ನು ದಾಖಲು ಮಾಡಲು ಮೃತನ ಹೆಂಡತಿ ಪಾರ್ವತೆವ್ವ ಇವಳು ವರದಿ ಕೊಟ್ಟ ಪ್ರಕಾರ ಸರ್ವೆ ನಂ.**53/1** ಬಿ**2, 10/1** ಬಿ, **36/2** ಬಿ ಆಸ್ತಿಗಳಿಗೆ ಕಂದಾಯ ಅಧಿಕಾರಿಗಳು ಹಕ್ಕು ಬದಲಾವಣೆ ಮಾಡಿರುವುದು ಈ ದಾಖಲೆಯಿಂದ ಕಂಡು ಬರುವುದು. ಅದೇರೀತಿ ಹಕ್ಕು ಬದಲಾವಣೆ ಆದೇಶ ಸಂಖ್ಯೆಃ **2273** ರ ದಿನಾಂಕಃ **16.07.1993** ರಂದು ವಾಟ್ನಿಯ ಮಾಡಿಕೊಂಡಿದ್ದು ಆ ಪ್ರಕಾರ ಸರ್ವೆ ನಂ.**169** ರ ವಿಸ್ತೀರ್ಣ **3** ಎಕರೆ **18** ಗುಂಟೆಯ ಜಮೀನು ಪಾರ್ವತೆವ್ವನ ಪಾಲಿಗೆ ಬಂದಿರುವುದು. ಈ ದಾಖಲೆಗಳ ಪ್ರಕಾರ ಸ್ಪಷ್ಟವಾಗುವುದೇನೆಂದರೆ ಈ ದಾವಾ ಆಸ್ತಿಗಳು ವಾದ ಪತ್ರದಲ್ಲಿ ಹೇಳಿರುವಂತೆ ವಾದಿಯ ತಂದೆಯ ಪಾಲಿಗೆ ಬಂದಿರುವಂತಹ ಆಸ್ತಿಗಳಾಗಿರುವುದಿಲ್ಲ. ಅವು ತಮ್ಮ ತಂದೆಯ ಸಹೋದರಾನಾದ ರಂಗಪ್ಪನ ಪಾಲಿಗೆ ಬಂದಿರುವಂತಹ ಆಸ್ತಿಗಳಾಗಿದ್ದು ಈ ಆಸ್ತಿಗಳನ್ನು ಪಾರ್ವತೆವ್ವ ತನ್ನ ಜೀವಿತ ಕಾಲದಲ್ಲಿ ನೊಂದಾಯಿತ ಮೃತ್ಯು ಪತ್ರ ಬರೆದು ಕೊಟ್ಟಿದ್ದು ಆ ಪ್ರಕಾರ ಪ್ರತಿವಾದಿ **6** ವಿನ ಹೆಸರಿನಲ್ಲಿ ಎಮ್ ಆರ್ ನಂ.ಎಚ್ **55** ದಿನಾಂಕಃ **25.04.2013** ರ

ಪ್ರಕಾರ ಹಾಗೂ ಎಮ್ ಆರ್ ನಂ.ಎಚ್ **56** ದಿನಾಂಕಃ **25.04.2013** ರ ಪ್ರಕಾರ ಹಕ್ಕು ಬದಲಾವಣೆಯಾಗಿದ್ದು ಅದರ ಆಧಾರದ ಮೇರೆಗೆ ಪ್ರತಿವಾದಿ **6** ರವರು ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ ಈ **3** ಆಸ್ತಿಗಳಿಗೆ ಕಬ್ಜೆದಾರರಾಗಿದ್ದು ಈ **3** ಆಸ್ತಿಗಳಿಗೆ ವಾದಿ ಮತ್ತು ಉಳಿದ ಪ್ರತಿವಾದಿಯರಿಗೆ ಯಾವುದೇ ಹಕ್ಕು ಹಿತಾಸಕ್ತಿ ಇರುವುದಿಲ್ಲ ಎಂಬುದು ಈ ದಾಖಲೆಗಳಿಂದ ಕಂಡು ಬರುವುದು. ಆದ್ದರಿಂದ ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತಹ ದಾವಾ ಆಸ್ತಿಗಳು ವಾದಿಯು ವಾದ ಪತ್ರದಲ್ಲಿ ಹೇಳಿರುವಂತೆ ತಮ್ಮ ಪೂರ್ವಜರಾದ ವೆಂಕನಗೌಡ ಪಾಟೀಲನ ಆಸ್ತಿಗಳಾಗಿರುವುದಿಲ್ಲ. ಈ ಆಸ್ತಿಗಳು ವೆಂಕನಗೌಡನ ಸಹೋದರನಾದ ಮೃತ ರಂಗಪ್ಪನ ಪಾಲೀಗೆ ಬಂದಿರುವಂತಹ ಆಸ್ತಿಗಳಾಗಿದ್ದು ಈತ ದಿನಾಂಕಃ **23.11.1988** ರಲ್ಲಿ ಮೃತಪಟ್ಟಿದ್ದು ಈತ ಮೃತಪಟ್ಟ ನಂತರ ವಾರಸಾ ನಾತೆಯಿಂದ ಈತನ ಹೆಂಡತಿಯಾದ ಪಾರ್ವತೆವ್ವಳ ಹೆಸರನಲ್ಲಿ ಮೆಟಗುಡ್ಡ ಗ್ರಾಮಂ ಜಮೀನು ಎಮ್ ಇ ನಂ.**1867** ಹಾಗೂ ರೂ ಗಿ ಗ್ರಾಮದ ಜಮೀನು ಎಮ್ ಇ ನಂ.**2273** ರ ಪ್ರಕಾರ ಹಕ್ಕು ಬದಲಾವಣೆಯಾಗಿದ್ದು ಪಾರ್ವತೆವ್ವ ತನ್ನ ಜೀವಿತ ಕಾಲದಲ್ಲಿ ದಿನಾಂಕ **14.02.1995** ರಂದು ನೊಂದಾಯಿತ ಮೃತ್ಯು ಪತ್ರವನ್ನು ಈ ಮಧ್ಯಂತರ ಅರ್ಜಿಯಲ್ಲಿ ಹೇಳಿರತಕ್ಕಂತಹ ಆಸ್ತಿಗಳಿಗೆ ಪ್ರತಿವಾದಿ **6** ರವರ ಹೆಸರಿನಲ್ಲಿ ನೊಂದಾಯಿತ ಮೃತ್ಯು ಪತ್ರವನ್ನು ಬರೆದುಕೊಟ್ಟಿದ್ದು ನಂತರ ದಿನಾಂಕಃ **02.02.2013** ರಂದು ಪಾರ್ವತೆವ್ವ ಮೃತಪಟ್ಟಿದ್ದು ಇವಳು ಮೃತಪಟ್ಟ ನಂತರ ಪ್ರತಿವಾದಿ **6** ರವರ ಹೆಸರಿನಲ್ಲಿ ಹಕ್ಕು ಬದಲಾವಣೆ ಸಂಖ್ಯೆಃ **55** ಮತ್ತು **56** ರ ಪ್ರಕಾರ ಕಂದಾಯ ಅಧಿಕಾರಿಗಳು ಆದೇಶ ಮಾಡಿದ್ದು ನಂತರ ಪ್ರತಿವಾದಿ **6** ರವರು ಸರ್ವೇ ನಂ.**169/3** ರ ಜಮೀನಿಗೆ ಸಂಬಂಧಪಟ್ಟಂತೆ ಪ್ರತಿವಾದಿ **10** ರವರ ಹೆಸರಿನಲ್ಲಿ ದಿನಾಂಕಃ **17.11.2018** ರಂದು ನೊಂದಾಯಿತ ದಾನ ಪತ್ರವನ್ನು ಬರೆದುಕೊಟ್ಟಿರುವುದು ಪ್ರತಿವಾದಿಯರು

ಹಾಜರುಪಡಿಸಿರುವ ದಾಖಲೆಗಳಿಂದ ಸ್ಪಷ್ಟವಾಗುವುದು. ಈ ಹಾಜರುಪಡಿಸಿರುವ ದಾಖಲೆಗಳಿಂದ ವಾದಿಯು ವಾದ ಪತ್ರದಲ್ಲಿ ಹೇಳಿರುವಂತೆ ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತಹ ದಾವಾ ಆಸ್ತಿಗಳ ಜಂಟಿ ಕಬ್ಜೆಯನ್ನು ಹೊಂದಿರುವುದಿಲ್ಲ. ಅವು ಪ್ರತಿವಾದಿ 6 ಮತ್ತು 10 ರವರ ಕಬ್ಜೆಯಲ್ಲಿರುವುದು ಸ್ಪಷ್ಟವಾಗುವುದು. ಆದ್ದರಿಂದ ಈ ಹಂತರದಲ್ಲಿ ಪ್ರತಿವಾದಿಯರು ಅವಲಂಬಿಸಿರುವ ತೀರ್ಪುಜನ್ಯ ಕಾನೂನಾದ **2024(4) KCCR 3519 (Muniveerappa and others Vs Muthappa and others)**ಃ

**"Civil Procedure Code, 1908-Order 39 Rules 1, 2 - Temporary injunction – Suit for partition – Many transactions taking between several persons, last transaction being gift deed based on which joint development agreement came to be executed – Plaintiff not in possession of suit property – Cold not make out a prima factie case – Not entitled to temporary injunction restraining defendants from alienating suit property."**

ಆದ್ದರಿಂದ ವಾದಿಯು ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ ಪ್ರತಿವಾದಿಯ 6 ಮತ್ತು 10 ರವರ ವಿರುದ್ದ ಈ ಮಧ್ಯಂತರ ಅರ್ಜಿಯಲ್ಲಿ ಹೇಳಿರವಂತಹ ದಾವಾ

ಆಸ್ತಿಗಳಿಗೆ ಸಂಬಂಧಪಟ್ಟಂತೆ ಪರಿಹಾರ ಪಡೆದುಕೊಳ್ಳಲು ಮೇಲ್ನೋಟಕ್ಕೆ ಸಮಂಜಸವಾದ ಯಾವುದೇ ಕಾರಣಗಳನ್ನು ಹೊಂದಿರುವುದಿಲ್ಲ. ಆದ್ದರಿಂದ ಒಂದು ವೇಳೆ ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸದ್ದಲ್ಲಿ ವಾದಿಗೆ ತುಂಬಲಾರದ ನಷ್ಟ ಹಾನಿ ಸಂಭವಿಸುವ ಸಾಧ್ಯತೆ ಇರುವುದು ಎಂಬುದನ್ನು ವಾದಿಯು ರುಜುವಾತು ಪಡಿಸಿರುವುದಿಲ್ಲ. ಆದ್ದರಿಂದ ವಾದಿಯು ಮೇಲ್ನೋಟದ ಕೇಸು ಇರುವುದಾಗಿ ಎಂದು ತೋರಿಸಲು ಹಾಗೂ ಅನುಕೂಲತೆಯ ಒಲುವು ಸಹ ವಾದಿಯ ಪರ ಆಗಿರುವುದೆಂದು ಹಾಗೂ ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸದಿದ್ದಲ್ಲಿ ತುಂಬಲಾರದ ನಷ್ಟ ವಾದಿಗೆ ಆಗುವುದು ಎಂಬ ಸಂಗತಿಯನ್ನು ರುಜುವಾತು ಪಡಿಸುವಲ್ಲಿ ವಾದಿಯು ವಿಫಲವಾಗಿರುವುದರಿಂದ ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಲು ಅನುಕೂಲತೆಯ ಒಲುವು ಮೇಲ್ನೋಟಕ್ಕೆ ವಾದಿಯ ಪರ ಇರುವದೆಂದು ಕಂಡು ಬರದೆ ಇರುವುದರಿಂದ ಈ ಮದ್ಯಂತರ ಅರ್ಜಿಯಲ್ಲಿ ಕೋರಿರುವಂತೆ ಪ್ರತಿವಾದಿ **6** ಮತ್ತು **10** ರವರ ವಿರುದ್ಧ ಆದೇಶ ಹೊರಡಿಸಲು ಯಾವುದೇ ಸಕಾರಣಗಳು ಇರುವುದಿಲ್ಲ. ಆದ್ದರಿಂದ ಅಂಶ **1** ರಿಂದ **3** ನ್ನು ನಕಾರಾತ್ಮಕವಾಗಿ ಉತ್ತರಿಸುತ್ತೇನೆ.

**14.** **ಅಂಶ 4 :** ಮೇಲ್ಕಾಣಿಸಿದ ಕಾರಣಗಳನ್ನು ಆಧರಿಸಿ ಈ ಕೆಳಕಂಡಂತೆ ಆದೇಶಿಸುವೇನು.

## ಆದೇಶ

ವಾದಿಯರು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ

**39** ನಿಯಮ **1** ಮತ್ತು **2** ಸಹ ಕಲಂ.**151** ರಡಿಯಲ್ಲಿ

ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ: **37** ನ್ನು ರೂ.**1000/-** ಖರ್ಚಿನೊಂನದಿಗೆ ವಜಾಗೊಳಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೇಲೆ ನೇರವಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿದ ನಂತರ ಓದಿ ತಿದ್ದುಪಡಿ ಮಾಡಿ ಬಹಿರಂಗ ನ್ಯಾಯಾಲಯದಲ್ಲಿ ಇದೇ ದಿನಾಂಕ: **24** ನೇ ಅಕ್ಟೋಬರ **2025** ನೇ ದಿನದಂದು ವಿದ್ಯುಕ್ತವಾಗಿ ಘೋಷಿಸಲಾಯಿತು).

(ವಿಜಯಕುಮಾರ.ಎಮ್.ಕನ್ನೂರ)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಮುಧೋಳ.

VIJAYAKUMAR KANNUR

Digitally signed by VIJAYAKUMAR KANNUR
Date: 2025.11.04 17:27:04 +0530